ದಿನಾಂಕಃ **16-08-2021.**

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ</u>

ಈ ದಾವೆಯನ್ನು ಮೊಡಕ್ಕ ಮತ್ತು ಚಿಕ್ಕಣ್ಣನವರು ಅವರ ಅಣ್ಣ ತಮ್ಮಂದಿರ ಮೇಲೆ ಹೂಡಿದ್ದಾರೆ. ಬೊಡಕ್ಕ ಚಿಕ್ಕಣ್ಣನವರ ಮೇಲೆ ಹೂಡಿದ್ದಾರೆ ಎಂದರೆ ಸರಿ. ಈ ದಾವೆಯನ್ನು ಮೊಡಕ್ಕ ಮತ್ತು ಚಿಕ್ಕಣ್ಣ ತಮ್ಮ ಹೆಸರಿಗೆ ದಾವಾ ಸ್ವತ್ತು ಆಗಬೇಕೆಂದು ಹೂಡಿದ್ದಾರೆ. ಈ ದಾವೆಯನ್ನು 2 ಸ.ನಂ. ಸ್ವತ್ತುಗಳಿಗಾಗಿ ಹೂಡಿದ್ದಾರೆ . ಅವುಗಳ ಸ.ನಂ., ವಿಸ್ತೀರ್ಣ , ಚೆಕ್ಕುಬಂದಿ , ನನಗೆ ಗೊತ್ತಿಲ್ಲ . ದಾವಾ ಸ್ವತ್ತುಗಳ ಅಕ್ಕ-ಪ್ಕಕ್ಕದಲ್ಲಿ ನನ್ನ ಜಮೀನುಗಳು ಇಲ್ಲ. ನನಗೆ ಇಬ್ಬರು ಗಂಡು ಮಕ್ಕಳು. ಅವರ ಹೆಸರು ನರಸಿಂಹ ಮತ್ತು ಪುಟ್ಟರಾಜು. ಮನೆಯ ವ್ಯವಹಾರಗಳನ್ನು ಅವರೇ ನೋಡಿಕೊಳ್ಳುತ್ತಾರೆ . ಎಮ್ಮೆ ವ್ಯಾಪಾರ ಮಾಡಲು ನಾನು ಊರುಾರಿಗೆ ಹೋಗುತ್ತೇನೆ ಎಂದರೆ ಸರಿ. ನಾನು ವ್ಯವಸಾಯ ಮಾಡುವುದನ್ನು ಬಿಟ್ಟು ಸುಮಾರು 10 ವರ್ಷಗಳು ಆಯಿತು. ನನ್ನ ಮಕ್ಕಳೇ ವ್ಯವಸಾಯವನ್ನು ನೋಡಿಕೊಳ್ಳುತ್ತಾರೆ. ನಾನು ಸಹ ಕೆಲವೊಮ್ಮೆ ವ್ಯವಸಾಯದ ಕೆಲಸ ಮಾಡುತ್ತೇನೆ ಎನ್ನುತ್ತಾರೆ. ವಾದಿ ಪರ ಸಾಕ್ಷಿ 2 ನರಸಿಂಹೇಗೌಡ ನನಗೆ ಸಂಬಂಧಿಕನಾಗಬೇಕು ಎಂದರೆ ಸರಿ. ಅವರು ಆರ್.ಎಮ್ .ಸಿ ನಲ್ಲಿ ಅಧ್ಯಕ್ಷರಾಗಿದ್ದರು ಎಂದರೆ ಸರಿ. ನಾವು ಅವರ ಮಾತನ್ನು ಕೇಳುತ್ತೇವೆ ಎಂದರೆ ಸರಿ. ನಾನು ಅವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸತ್ಯವಾಗಿ ಹೇಳುತ್ತಿದ್ದೇನೆ.

ನನ್ನ ಪ್ರಮಾಣ ಪತ್ರದಲ್ಲಿನ ಎಲ್ಲಾ ಅಂಶಗಳು ನನಗೆ ಗೊತ್ತಿಲ್ಲ. ಬಿಳಿಯಪ್ಪನ ತಾತನ ಹೆಸರು ನನಗೆ ಗೊತ್ತಿಲ್ಲ. ಮೊಡಕ್ಕನ ಗಂಡನ ಹೆಸರು ಚಿಕ್ಕಣ್ಣ , ಆತನ ತಾತನ ಹೆಸರು ನನಗೆ ಗೊತ್ತಿಲ್ಲ . ಮೊಡಕ್ಕನ ಗಂಡ ಚಿಕ್ಕಣ್ಣ ಮತ್ತು ಬಿಳಿಯಪ್ಪ ಯಾರ ಮಕ್ಕಳು ಎಂದು ನನಗೆ ಗೊತ್ತಿಲ್ಲ. ನನಗೆ ಪ್ರತಿವಾದಿ ಮೊಡಕ್ಕನ ಕುಟುಂಬದ ಬಗ್ಗೆ ಏನೂ ಗೊತ್ತಿಲ್ಲ ಎಂದರೆ ಸರಿ. ಬಿಳಿಯಪ್ಪನಿಗೆ ಚಿಕ್ಕವ್ವ ಎಂಬ ಸಹೋದರಿ ಇರಲಿಲ್ಲ ಎಂದರೆ ಸರಿಯಲ್ಲ. ಬಿಳಿಯಪ್ಪನ ಅಣ್ಣ-ತಮ್ಮಂದಿರು ಮೂವರು. ಅವರ ಹೆಸರು ಬಿಳಿಯಜ್ಜ , ನಾಗಜ್ಜ , ಇನ್ನೊಬ್ಬರ ಹೆಸರು ನನಗೆ ಗೊತ್ತಿಲ್ಲ. ಬಿಳಿಯಪ್ಪನಿಗೆ ಚಿಕ್ಕವ್ವ ಎಂಬ ಸಹೋದರಿ ಇರಲಿಲ್ಲ , ನಾನು ಸುಳ್ಳು ಹೇಳುತ್ತಿದ್ದೇನೆ ಎಂದರ ಸರಿಯಲ್ಲ. ಚಿಕ್ಕವ್ವನ ಮಕ್ಕಳು ಕೆಂಪಮ್ಮ ಮತ್ತು ಗಿರಿಯಮ್ಮ. ಚಿಕ್ಕವ್ವನಿಗೆ ಗಿರಿಯಮ್ಮ ಎಂಬ ಮಗಳು ಇರಲಿಲ್ಲ ಎಂದರೆ ಸರಿಯಲ್ಲ. ನಾಗೇಂದ್ರಪ್ಪ ಮತ್ತು ವಾದಿಗಳು ಗಿರಿಯಮ್ಮನ ಮಕ್ಕಳು ಅಲ್ಲ ಎಂದರೆ ಸರಿಯಲ್ಲ. ವಾದಿಗಳು ಮತ್ತು ನಾಗೇಂದ್ರಪ್ಪ ಚಿಕ್ಕವ್ವನ ಮೊಮ್ಮಕ್ಕಳಲ್ಲ ಎಂದರೆ ಸರಿಯಲ್ಲ. ವಾದಿಗಳು ಮತ್ತು ನಾಗೇಂದ್ರಪ್ಪನವರು ಬಿಳಿಯಪ್ಪನ ಮನೆಯಲ್ಲಿ ಯಾವತ್ತಿಗೂ ವ್ಯವಸಾಯದ ಕೆಲಸ ಮಾಡಿಕೊಂಡಿರಲಿಲ್ಲ ಎಂದರೆ ಸರಿಯಲ್ಲ. ಬಿಳಿಯಪ್ಪನಿಗೂ ಮತ್ತು ವಾದಿ ಮತ್ತು ಪ್ರತಿವಾದಿ 4 ರವರಿಗೆ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಬಿಳಿಯಪ್ಪನ ಹೆಂಡತಿ ಕೆಂಪಮ್ಮನಿಗೆ ಮಕ್ಕಳಿಲ್ಲದ ಕಾರಣ ಕೆಂಪಮ್ಮ ಮತ್ತು ಮೊಡಕ್ಕ ಹಾಗೂ ಪ್ರತಿವಾದಿ 2 ಮತ್ತು 3 ರವರು ಜಂಟಿಯಾಗಿ ದಾವಾ ಸ್ವತ್ತುಗಸಳನ್ನು ಅನುಭವಿಸುತ್ತಿದ್ದರು . ಕೆಂಪಮ್ಮನ ಮರಣಾನಂತರ 1 ರಿಂದ 3 ರವರು ಮಾತ್ರ ಅನುಭವಿಸುತ್ತಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಒಂದು ಸ.ನಂ.ನಲ್ಲಿ ಮೊಡಕ್ಕ ಇದ್ದಾರೆ. ಇನ್ನೊಂದು ಸ.ನಂ. ನಲ್ಲಿ ಗಿರಿಯಮ್ಮನ ತಂಗಿ ಮಕ್ಕಳು

ಅನುಭವಿಸುತ್ತಿದ್ದಾರೆ ಎನ್ನುತ್ತಾರೆ . ಯಾರು ಯಾರು ಯಾವ ಸ.ನಂ. ನಲ್ಲಿ ಮತ್ತು ಎಷ್ಟು ವಿಸ್ತೀರ್ಣದಲ್ಲಿ ಅನುಭವಿಸುತ್ತಿದ್ದಾರೆ ಎಂದು ನನಗೆ ಹೇಳಲಾಗುವುದಿಲ್ಲ. ವಾದಿ ಮತ್ತು ಪ್ರತಿವಾದಿ 4 ನಾಗೇಂದ್ರಪ್ಪನವರು ಕೆಂಪಮ್ಮನಿಗೆ ವ್ಯವಸಾಯದಲ್ಲಿ ಬೆಂಬಲವಾಗಿ ನಿಂತಿದ್ದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕೆಂಪಮ್ಮನ ಮರಣಾನಂತರ ವಾದಿಗಳು ಮೊಡಕ್ಕನ ಜೊತೆ ಯಾವತ್ತಿಗೂ ದಾವಾ ಸ್ವತ್ತು ಗಳ ಜಂಟೀ ಸ್ವಾಧೀನ ಮತ್ತು ಅನುಭವದಲ್ಲಿ ಇಲ್ಲ ಎನ್ನುತ್ತಾರೆ . ನನಗೆ ಪ್ರತಿವಾದಿ ಮೊಡಕ್ಕನವರ ಕುಟುಂಬದ ಬಗ್ಗೆ ಯಾವುದೇ ವಿಚಾರಗಳು ಗೊತ್ತಿಲ್ಲದಿದ್ದರೂ ಸಹ ನಾನು ಚಿಕ್ಕಣ್ಣ ಮತ್ತು ನರಸಿಂಹೇಗೌಡರ ಮಾತ್ತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಬಿಳಿಯಪ್ಪ ಮತ್ತು ಕೆಂಪಮ್ಮನ ಮರಣಾನಂತರ ಪ್ರತಿವಾದಿ ಮೊಡಕ್ಕ ಮತ್ತು ಅವರ ಮಕ್ಕಳು ಮಾತ್ರ ಅನುಭವಿಸುತ್ತಿದ್ದಾರೆ ಎಂದರೆ ಸರಿಯಲ್ಲ ಪ್ರತಿವಾದಿಗಳು ಮಾತ್ರ ದಾವಾ ಸ್ವತ್ತುಗಳನ್ನು ಅನುಭವಿಸುತ್ತಿದ್ದಾರೆ. ವಾದಿ ಗಳು ಯಾವತ್ತಿಗೂ ದಾವಾ ಸ್ವತ್ತಿನ ಅನುಭವದಲ್ಲಿಲ್ಲ ಎನ್ನುತ್ತಾರೆ . ವಾದಿ ಮತ್ತು 4 ನೇ ಪ್ರತಿವಾದಿ , ಪ್ರತಿವಾದಿ 1 ರಿಂದ 3 ರವರ ಕುಟುಂಬಕ್ಕೆ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ಅವರಿಗೆ ಹಕ್ಕು ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ನೀವು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ , ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆರೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ. ಶಿರಾ.